# ನೀನ್ಯಾತಕೋ ನಿನ್ನ ಹಂಗ್ಯಾತಕೋ

**(Version – 1)**

1. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 55. These lyrics are given as Version-1.
2. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 61.
3. **Note:** Lyrics given without highlights are as per Ref. 1. These lyrics are popularly sung by singers. Lyrics as per Ref. 2 are different but the theme is same. Hence, it is given separately also as Version – 2, are listed separately.
4. **Note:** Singer has followed lyrics as in Ref. 1.
5. **Note:** Ankita in these versions are different. In Version-1 it is 'siri purandara vittala' and in Version-2, it is 'sri purandara vittala'. Hence, they are mentioned in different versions.

ರಾಗ: ಪೂರ್ವಿ ತಾಳ: ಆದಿ

ನೀನ್ಯಾತಕೋ ನಿನ್ನ ಹಂಗ್ಯಾತಕೋ
ನಿನ್ನ ನಾಮದ ಬಲವೊಂದಿದ್ದರೆ ಸಾಕೋ ॥ ಪ ॥

ಆ ಮರ ಈ ಮರ ಧ್ಯಾನಿಸುತಿರುವಾಗ
ರಾಮ ರಾಮ ಎಂಬ ನಾಮವೆ ಕಾಯ್ತೊ ॥ 1 ॥

ಬಾಲೆಯ ಸಭೆಯಲ್ಲಿ ಸೀರೆಯ ಸೆಳೆವಾಗ
ಬಾಲಕೃಷ್ಣನೆಂಬ ನಾಮವೆ ಕಾಯ್ತೊ ॥ 2 ॥

ಯಮನ ದೂತರು ಅಜಮಿಳನೆಳೆವಾಗ
ನಾರಾಯಣನೆಂಬ ನಾಮವೆ ಕಾಯ್ತೊ ॥ 3 ॥

ಕರಿ ಮಕರಿಗೆ ಸಿಕ್ಕಿ ಮೊರೆಯಿಡುತಿರುವಾಗ
ಆದಿಮೂಲನೆಂಬ ನಾಮವೆ ಕಾಯ್ತೊ ॥ 4 ॥

ಪ್ರಹ್ಲಾದನ ಪಿತ ಭಾದಿಸುತಿರುವಾಗ
ನಾರಸಿಂಹನೆಂಬ ನಾಮವೆ ಕಾಯ್ತೊ ॥ 5 ॥

ಹಸುಳೆ ಆ ಧೃವರಾಯ ಅಡವಿಗೆ ಪೋಪಾಗ
ವಾಸುದೇವನೆಂಬ ನಾಮವೆ ಕಾಯ್ತೊ ॥ 6 ॥

ನಿನ್ನ ನಾಮಕೆ ಸರಿ ಯಾವುದು ಕಾಣೆನೋ
ಘನ್ನ ಮಹಿಮ ಸಿರಿ ಪುರಂದರ ವಿಠಲ ॥ 7 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಆ ಮರ ಈ ಮರ ...... -** ವಾಲ್ಮೀಕಿಯ ಸಾಧನೆಯನ್ನು ಕುರಿತು ಬಳಕೆಯಲ್ಲಿರುವ ಕಥೆಯೊಂದರ ಉಲ್ಲೇಖ ಇದು. ಬೇಡನಾಗಿದ್ದ ವಾಲ್ಮೀಕಿಯು ಸಪ್ತರ್ಷಿಗಳನ್ನು ಕಾಡಿ, ಅವರ ಮಾತಿನಿಂದ ವಿರಕ್ತಿಯನ್ನು ಪಡೆದು, ಅವರಿಂದ ಉಪದೇಶವನ್ನು ಬೇಡಿದಾಗ ಅವರು ಕಾಡಿನಲ್ಲಿದ್ದ ಅರಗಳನ್ನು ಅವನಿಗೆ ತೋರಿಸಿ ' ಆ ಮರ ಈ ಮರ, ಮರ ಮರಾ ... ' ಎಂದು ಜಪ ಮಾಡುವಂತೆ ಹೇಳಿದರೆಂದೂ, 'ಆ ಮರ ಈ ಮರಾ' ಎಂದು ಮತ್ತೆ ಮತ್ತೆ ಹೇಳಿದುದು 'ರಾಮ ರಾಮ' ಎಂದಾಗಿ, ವಾಲ್ಮೀಕಿಯು ರಾಮಭಕ್ತನಾದನೆಂದು ಕಥೆ. ಆದರೆ ಈ ಕಥೆಗೆ ಆಧಾರವೇನೋ ತಿಳಿಯದು !

**ಹಂಗು = ಋಣ**

**ಬಾಲೆಯ ಸಭೆಯಲ್ಲಿ ...... -** ದ್ರೌಪದಿ ವಸ್ತ್ರಾಪಹರಣದ ಪ್ರಸಂಗ

**ಕರಿ ಮಕರಿಗೆ ...... -** ಗಜೇಂದ್ರ ಮೋಕ್ಷದ ಪ್ರಸಂಗ

**Classification:** Keerthane
**Ankita:** siri purandara vittala
**Location:** NA
**Category:** Mahatmya Gyana, Nindaa Stuti.
**Sub-Category:** mara, Dhyana, rama, draupadi, Krishna, yama, ajamila, Narayana, gaja, mosale, prahallada, Dhruva,

**Pravachana:** NA

**Explanation:** NA